**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**

**O.S. No.1676/2025 C.W**
**O.S No. 1677/2025**

**DW: 1**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 10.07.2026**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ: ಶ್ರೀ. ಜಿ.ಎಂ.ಸಿ ರವರಿಂದ**

16. ನಿಡಿ-02 ಕ್ರಯಪತ್ರದಲ್ಲಿ ದಾವಾ ಸ್ವತ್ತನ್ನು ಕೃಷಿ ಜಮೀನು ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣವನ್ನು 09.08 ಗುಂಟೆ ಎಂದು ನಮೂದಿಸಿದ್ದರೂ ಸಹ ನಿಡಿ-02 ಕ್ರಯಪತ್ರದಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣವನ್ನು 10.00 ಗುಂಟೆ ಎಂದು ನಮೂದಿಸಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ 10 ಗುಂಟೆಯಲ್ಲಿ ಖರಾಬು ಸಹ ಒಳಗೊಂಡಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-02 ರ ಸಮಯದಲ್ಲಿ ದಾವಾ ಸ್ವತ್ತು 10 ಗುಂಟೆ ಇತ್ತು ಎಂದು ನಾನು ಯಾವುದೇ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಿಡಿ-02 ಕ್ರಯಪತ್ರದ ಸ್ವತ್ತಿನ ಪೂರ್ವ ದಿಕ್ಕಿಗೆ 15 ಅಡಿ ಅಗಲದ ದಾರಿ ಇರುತ್ತದೆ ಎಂದು ನಮೂದಿಸಿರುತ್ತೇವೆ ಎಂದರೆ ಸರಿ. ಆದರೆ ಸದರಿ 15 ಅಡಿ ಅಗಲದ ದಾರಿಯು ಯಾವ ಸರ್ವೆ ನಂಬರ್‌ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ನಿಡಿ-02 ರ ಕ್ರಯಪತ್ರದಲ್ಲಿ ನಮೂದಿಸಿರುವ ಕ್ರಯದ ಹಣವು ಗೌರಮ್ಮರವರಿಗೆ ನೀಡಿರುವುದಿಲ್ಲ ಎಂದರೆ ಸರಿ.

17. ನಿಡಿ-02 ಮತ್ತು ನಿಡಿ-03 ಕ್ರಯಪತ್ರಗಳ ಮಧ್ಯೆ ಆರು ತಿಂಗಳುಗಳ ಕಾಲ ಅಂತರ ಇರುತ್ತದೆ ಎಂದರೆ ಸರಿ. ಸದರಿ ಅಂತರದ ಅವಧಿಯಲ್ಲಿ ನಿಡಿ-03 ಕ್ರಯಪತ್ರದಲ್ಲಿ ನಮೂದಿಸಿರುವ ಸ್ವತ್ತುಗಳು ಭೂ ಪರಿವರ್ತನೆ ಆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಹಾಗೂ ಸದರಿ ಸ್ವತ್ತುಗು ಭೂ ಪರಿವರ್ತನೆ ಆಗಿರುವುದಿಲ್ಲ. ನಿಡಿ-03 ಕ್ರಯಪತ್ರದಲ್ಲಿ ಸ್ವತ್ತಿನ ಸಂಖ್ಯೆಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಖಾತಾ ಸಂಖ್ಯೆಯನ್ನು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ಲಕ್ಷ್ಮೀದೇವಮ್ಮ ರವರು 9.04 ಗುಂಟೆ ಜಮೀನನ್ನು ನಾಲ್ಕು ಕ್ರಯಪತ್ರಗಳ ಮೂಲಕ ನಮ್ಮ ಮಾರಾಟ ಮಾಡಿದ ಕ್ರಯಪತ್ರಗಳಲ್ಲಿ ಸ್ವತ್ತಿನ ಸಂಖ್ಯೆಯನ್ನು ನಮೂದಿಸಿರುವುದಿಲ್ಲ ಎಂದರೆ ಖಾತಾ ಸಂಖ್ಯೆಯನ್ನು ನಮೂದಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಎಲ್ಲಾ ಕ್ರಯಪತ್ರಗಳಲ್ಲಿ ಖಾತಾ ಸಂಖ್ಯೆ 105 ಎಂದು ನಮೂದಿಸಿರುತ್ತಾರೆ ಎಂದರೆ ಸರಿ ಹಾಗೂ ಸ್ವತ್ತಿನ ಸಂಖ್ಯೆಯನ್ನು 35/5 ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ನಿಡಿ-03 ರಲ್ಲಿ ಕ್ರಯಪತ್ರದಲ್ಲಿ ಸ್ವತ್ತುಗಳು ಭೂ ಪರಿವರ್ತನೆ

ಆದ ಬಗ್ಗೆ ಮಾಹಿತಿ ನಮೂದಿಸಿರುವುದಿಲ್ಲ ಹಾಗೂ ಸ್ವತ್ತುಗಳು ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಬರುತ್ತವೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ.

18. ನಿಡಿ-03 ರಿಂದ 06 ಕ್ರಯಪತ್ರಗಳಲ್ಲಿ ನಮೂದಿಸಿರುವ ಸ್ವತ್ತಿನ ಚೆಕ್ಕುಬಂಧಿಯು ಸೃಷ್ಟಿಸಿ ನಮೂದಿಸಿರುತ್ತೇವೆ ಹಾಗೂ ಆ ರೀತಿ ಯಾವುದೇ ಸ್ವತ್ತುಗಳು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-03 ರಿಂದ 06 ಕ್ರಯಪತ್ರಗಳಿಗೆ ಯಾವುದೇ ನಕಾಶೆಯನ್ನು ಲಗತ್ತಿಸಿರುವುದಿಲ್ಲ ಎಂದರೆ ಸರಿ. ನಿಡಿ-05 ಕ್ರಯಪತ್ರದ ಸ್ವತ್ತಿನ ಷೆಡ್ಯೂಲ್‌ನ ವಿಸ್ತೀರ್ಣದಲ್ಲಿ ತಿದ್ದುಪಡಿ ಮಾಡಿದಂತೆ ಕಾಣುತ್ತದೆ ಎಂದರೆ ಸರಿ. ನಿಡಿ-03 ಮತ್ತು ನಿಡಿ-07 ರಲ್ಲಿ ನಮೂದಿಸಿರುವ ಸ್ವತ್ತಿನ ಚೆಕ್ಕುಬಂಧಿ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನಿಡಿ-03 ರಲ್ಲಿ ನಮೂದಿಸಿರುವ ಸ್ವತ್ತಿಗೆ ಯಾವುದೇ ಸಂಖ್ಯೆ ಇರದೇ ಇದ್ದರೂ ಸಹ ನಾವೇ ಖೊಟ್ಟಿಯಾಗಿ ಸ್ವತ್ತಿನ ಸಂಖ್ಯೆಯನ್ನು ಸೃಷ್ಟಿಮಾಡಿಕೊಂಡು ನಿಡಿ-07 ನನ್ನ ಕ್ರಯಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-05 ರಲ್ಲಿ ನಮೂದಿಸಿರುವ ಸ್ವತ್ತಿಗೆ ಯಾವುದೇ ಸಂಖ್ಯೆ ಇರದೇ ಇದ್ದರೂ ಸಹ ನಾವೇ ಖೊಟ್ಟಿಯಾಗಿ ಸ್ವತ್ತಿನ ಸಂಖ್ಯೆಯನ್ನು ಸೃಷ್ಟಿಮಾಡಿಕೊಂಡು ನಿಡಿ-08 ನನ್ನ ಕ್ರಯಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-06 ರಲ್ಲಿ ನಮೂದಿಸಿರುವ ಸ್ವತ್ತಿಗೆ ಯಾವುದೇ ಸಂಖ್ಯೆ ಇರದೇ ಇದ್ದರೂ ಸಹ ನಾವೇ ಖೊಟ್ಟಿಯಾಗಿ ಸ್ವತ್ತಿನ ಸಂಖ್ಯೆಯನ್ನು ಸೃಷ್ಟಿಮಾಡಿಕೊಂಡು ನಿಡಿ-09 ನನ್ನ ಕ್ರಯಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

19. ನಾನು ದಾವಾ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ಅನುಮೋದಿತ ನಕ್ಷೆಯನ್ನು ನನ್ನ ಮಾರಾಟಗಾರರಿಂದ ಪಡೆದಿರುವುದಿಲ್ಲ. ನಿಡಿ-07 ರಿಂದ ನಿಡಿ-09 ರ ಕ್ರಯಪತ್ರಗಳಲ್ಲಿ ನಮೂದಿಸಿರುವ ಸ್ವತ್ತಿಗೆ ಯಾವುದೇ ಅಧಿಕೃತ ನಕಾಶೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-07 ರಿಂದ 09 ಕ್ರಯಪತ್ರಗಳು ನೋಂದಣಿಯಾಗುವ ಸಮಯದಲ್ಲಿ ಅವುಗಳಲ್ಲಿ ನಮೂದಿಸಿರುವ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಸ್ವತ್ತುಗಳು ಕೃಷಿ ಜಮೀನುಗಳಾಗಿದ್ದು ಹಾಗೂ ಗೌರಮ್ಮರವರ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಇದ್ದವು ಎಂದರೆ ಸರಿಯಲ್ಲ. ಸರ್ವೆ ನಂಬರ್ 35/5 ರ ಬಗ್ಗೆ ತಹಶೀಲ್ದಾರ್ ರವರು ಗ್ರಾಮಠಾಣಾ ವ್ಯಾಪ್ತಿಗೆ ಸೇರುತ್ತವೆ ಎಂದು ಯಾವುದೇ ಆದೇಶ ಮಾಡಿರುವುದಿಲ್ಲ ಎಂದರೆ ಸರಿ. ನಿಡಿ-12 ಪಂಚಾಯಿತಿ ದಾಖಲಾತಿಯನ್ನು ನಾನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-12 ಅನ್ನು ನೀಡುವ ಸಮಯದಲ್ಲಿ ಸರ್ವೆ ಸಂಖ್ಯೆ 35/5 ಕೃಷಿ ಜಮೀನು ಆಗಿತ್ತು ಎಂದರೆ ಸರಿಯಲ್ಲ. ನಿಡಿ-12 ದಾಖಲಾತಿಯು ಪಂಚಾಯಿತಿಯಲ್ಲಿ ಇರುತ್ತದೆ. ನಾನು ಪಂಚಾಯಿತಿಯಿಂದ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಾರಾಟಗಾರರ ಹೆಸರಿನಲ್ಲಿ

ಯಾವುದೇ ಖಾತೆಗಳು ಇರದೇ ಇದ್ದರೂ ಸಹ ನನ್ನ ಹೆಸರಿನಲ್ಲಿ ಖಾತೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

20. ನಿಡಿ-14 ರಿಂದ ನಿಡಿ-21 ದಾಖಲಾತಿಗಳನ್ನು ನಾನು ಈ ದಾವೆಗೆ ಅನುಕೂಲವಾಗಲಿ ಎಂದು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸನ್ 2008 ನೇ ಸಾಲಿನಲ್ಲಿ ಸ್ವತ್ತುಗಳು ಪಂಚಾಯಿತಿಯಿಂದ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬಂದಿರುತ್ತವೆ. ನಿಡಿ-22 ರಲ್ಲಿ ಋಣಭಾರ ಪ್ರಮಾಣ ಪತ್ರದಲ್ಲಿ ಸ್ವತ್ತಿಗೆ ಖರಾಬು ಇರುತ್ತದೆ ಎಂದು ಸುಳ್ಳು ನಮೂದಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-22 ರಿಂದ 30 ಋಣಭಾರ ಪ್ರಮಾಣ ಪತ್ರಗಳನ್ನು ಗೌರಮ್ಮರವರಿಗೆ ಮೋಸ ಮಾಡಲು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-01 ಅನ್ನು ನನ್ನ ದಾವೆಗೆ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-01 ರಲ್ಲಿ 15 ಅಡಿ ಅಗಲದ ರಸ್ತೆಯು ಯಾವ ಸರ್ವೆ ಸಂಖ್ಯೆಯಲ್ಲಿ ಬರುತ್ತದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಡಿ-01 ದಾಖಲಾತಿಯು ಮಸಕಾಗಿದೆ ಎಂದರೆ ಸರಿಯಲ್ಲ. ನಿಡಿ-01 ಅನ್ನು ದೊಡ್ಡದಾಗಿ ತಯಾರಿಸಿ ಸಲ್ಲಿಸಿರುತ್ತೇನೆ. ನನ್ನ ಕ್ರಯಪತ್ರಗಳಲ್ಲಿ ನಮೂದಿಸಿರುವ ಸ್ವತ್ತುಗಳ ಮಧ್ಯೆದಲ್ಲಿ ಯಾವುದೇ ಅಂತರ ಇರುವುದಿಲ್ಲ ಎಲ್ಲವೂ ಒಂದಕ್ಕೊಂದು ಹೊಂದಿಕೊಂಡು ಇರುತ್ತವೆ. ನಿಡಿ-07 ರಿಂದ 09 ಕ್ರಯಪತ್ರಗಳಲ್ಲಿ ನಮೂದಿಸಿರುವ ಸ್ವತ್ತುಗಳಿಗೆ ಪೂರಕವಾದ ಯಾವುದೇ ಅಧಿಕೃತವಾದ ನಕ್ಷೆಗಳು ಇರುವುದಿಲ್ಲ ಎಂದರೆ ಸರಿ.

21. ನನ್ನ ಮಾರಾಟಗಾರರು ಎಷ್ಟು ವರ್ಷಗಳ ಕಾಲ ಸ್ವತ್ತುಗಳ ಕಂದಾಯವನ್ನು ಪಂಚಾಯಿತಿಗೆ ಪಾವತಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಗೌರಮ್ಮನ ಸ್ವತ್ತು ಕೃಷಿ ಜಮೀನಾಗಿದ್ದರಿಂದ ನನ್ನ ಮಾರಾಟಗಾರರ ಹೆಸರಿನಲ್ಲಿ ಪಂಚಾಯಿತಿಯಲ್ಲಿ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-31 ರಿಂದ ನಿಡಿ-68 ಆಸ್ತಿ ತೆರಿಗೆ ರಶೀದಿಗಳು ಸರ್ವೆ ಸಂಖ್ಯೆ 35/5 ಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-38 ರಿಂದ ನಿಡಿ-68 ಆಸ್ತಿ ತೆರಿಗೆ ರಶೀದಿಗಳು ದಾವಾ ಸಲ್ಲಿಸಿದ ನಂತರದ ದಾಖಲಾತಿಗಳು ಎಂದರೆ ಸರಿ. ದಾವಾ ಸ್ವತ್ತುಗಳು ಖಾಲಿ ನಿವೇಶನಗಳು ಆಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಸ್ಥಳೀಯ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕು ಎಂದರೆ ಸರಿ. ನಾನು ಯಾವುದೇ ಅನುಮತಿ ಪಡೆದಿರುವುದಿಲ್ಲ. ನಿಡಿ-69 ರಿಂದ 77 ವಿದ್ಯುತ್ ಬಿಲ್‌ಗಳು ಸರ್ವೆ ಸಂಖ್ಯೆ 35/5 ಕ್ಕೆ ಸಂಬಂಧಿಸಿರುವುದಿಲ್ಲ ಹಾಗೂ ನಾನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-70 ರಿಂದ ನಿಡಿ-77 ದಾಖಲಾತಿಗಳು ದಾವಾ ಸಲ್ಲಿಸಿದ ನಂತರದ ದಾಖಲಾತಿಗಳು ಎಂದರೆ ಸರಿ.

22. ನಾಗೇಶ್ ರವರು ಗೌರಮ್ಮರವರಿಂದ ಸರ್ವೆ ಸಂಖ್ಯೆ 35/5 ಅನ್ನು ಕ್ರಯಕ್ಕೆ ಪಡೆದಿರುವ ವಿಷಯವು ದಾವೆಯ ಸಮನ್ಸ್ ಅನ್ನು ನ್ಯಾಯಾಲಯದಿಂದ ಸ್ವೀಕರಿಸಿದ ನಂತರ ತಿಳಿದಿರುತ್ತದೆ. ಸದರಿ ಕ್ರಯದ ಬಗ್ಗೆ ನನಗೆ ಅಸಲು ದಾವಾ ಸಂಖ್ಯೆ 192/2011 ಚಾಲ್ತಿ ಇರುವ ಸಮಯದಲ್ಲಿ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಿಡಿ-78 ಕ್ರಯಪತ್ರವು ನಾಗೇಶ್ ರವರಿಗೆ ಸಂಬಂಧಿಸಿರುತ್ತದೆ ಹಾಗೂ ಸದರಿ ಕ್ರಯಪತ್ರದೊಂದಿಗೆ ಅಧಿಕೃತ ನಕಾಶೆ ಸಹ ಇರುತ್ತದೆ ಎಂದರೆ ಸರಿ. ನಾಗೇಶ್ ನಿಡಿ-78 ಕ್ರಯಪತ್ರವನ್ನು ನ್ಯಾಯಾಲಯದ ಆದೇಶದ ಮೇರೆಗೆ ಪಡೆದಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾಗೇಶ್ ರವರು ಕ್ರಯಪತ್ರದ ಅನ್ವಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ ದರ್ಜೆನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**